ಕರ್ನಾಟಕ ವಿಧಾನಸಭೆ

ಶುಕ್ರವಾರ 13ನೇ ಫೆಬ್ರವರಿ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-5 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ. ವಿ. ವೆಂಕಟಪ್ಪ) ರವರು

ಪೀಠವನ್ನು ಅಲಂಕರಿಸಿದ್ದರು.

1. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಟಿ. ರಾಜಣ್ಣ ಕಾರ್ಯದರ್ಶಿ (ಕರ್ನಾಟಕ ವಿಧಾನಸಭೆ) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(i) ಕರ್ನಾಟಕ ಸಹಕಾರಿ ಬಟ್ಟೆಗಿರಣಿಗಳ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕ, 2004. ಅನುಬಂಧ – I

(ii) ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2004. ಅನುಬಂಧ – II

(iii) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2004. ಅನುಬಂಧ – III

(iv) ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ, 2004. ಅನುಬಂಧ – IV

(v) ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2004. ಅನುಬಂಧ– V

2. ಶಾಸನ ರಚನೆ

(i) ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕ, 2004

ಮಂಡನೆಗೆ ಅನುಮತಿ ಕೋರಿಕೆ

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, "2004ನೇ ಸಾಲಿನ ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"2004ನೇ ಸಾಲಿನ ಶಿಶುವಿವಾಹ ಪ್ರಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, "2004ನೇ ಸಾಲಿನ ಶಿಶುವಿವಾಹ ಪ್ರತಿಬಂಧಕ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."